ಇನ್ನೂ ನನ್ನ ಎರಡನೆಯ ಪ್ರಶ್ನೆಗೂ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಈ ಮಂಡಲ ಪಂಚಾಯಿತಿ ಮತ್ತು ತಾಲ್ಲೂಕಾ ಸಲಹಾ ಸಮಿತಿಗಳ ಉದ್ದೇಶ ಏನು ಎಂದು ಗೊತ್ತಾಗುತ್ತಿಲ್ಲ. ಮಂಡಲ ಪ್ರಧಾನರು ನಮ್ಮನ್ನೆಲ್ಲಾ ಕೂಡಿಸಿಕೊಳ್ಳುತ್ತಾರೆ ಚರ್ಚೆ ಮಾಡುತ್ತೇವೆ. ಕೆಲಸಗಳ ಪಟ್ಟಿ ಕೊಡುತ್ತಾರೆ ಅದನ್ನು ನಾವು ಪರಿಶೀಲನೆ ಮಾಡಿಂತ್ತೇವೆ ಮೇಲಕ್ಕೆ ಕಳುಹಿಸಿಕೊಡುತ್ತೇವೆ. ಒಂದು ಲೋಟ ಕಾಫಿ ಕೊಟ್ಟು, ಎರಡು ಬಿಸ್ಕೆಟ್ ಕೊಟ್ಟು ನಮ್ಮನ್ನು ಮನೆಗೆ ಕಳುಹಿಸುತ್ತಾರೆ. ಇಷ್ಟೇ ಈ ಸಲಹಾ ಸಮಿತಿಯ ಕೆಲಸ. ದಯವಾಡಿ ಈ ಸಲಹಾ ಸಮಿತಿಯನ್ನು ರದ್ದು ಮಾಡಿ. ಇಲ್ಲಿರುವ ಅನೇಕ ಶಾಸಕರಲ್ಲಿ ಯಾರನ್ನು ಬೇಕಾದರೂ ಕೇಳಿ ಶಾಸಕರ ಸಲಹೆಯನ್ನು ಪಡೆದುಕೊಂಡು ಇದನ್ನು ರದ್ದು ಮಾಡುವುದು ಒಳ್ಳೆಯದು ಎಂದು ಅಧ್ಯಕ್ಷರ ಮೂಲಕ ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಶಾಸನ ದತ್ತವಾಗಿ ತಮಗೆ ಗೊತ್ತಿರುವ ಹಾಗೆ ಈ ಎರಡೂ ಘಟಕಗಳಿಗೆ ಅಧಿಕಾರ ಇದೆ. ಒಂದು ಮಂಡಲ ಪಂಚಾಯಿತಿ ಮತ್ತು ಇನ್ನೊಂದು ಜಿಲ್ಲಾ ಪರಿಷತ್ತು. ಮಧ್ಯಂತರವಾದ ಘಟಕಗಳು ಚುನಾಯಿತವಾದಂಥ ಘಟಕಗಳಲ್ಲ, ಇವು ಚುನಾಯಿತ ಘಟಕ ಅಲ್ಲದೇ ಇದ್ದರೂ ಕೂಡಾ ಹೆಚ್ಚು ಕೆಲಸ ಮಾಡುವುದಕ್ಕೆ ಅವಕಾಶ ಇದೆ. ಜಿಲ್ಲಾ ಪರಿಷತ್ ಪರವಾಗಿ ಉಪಸಮಿತಿ ರೀತಿಯಲ್ಲಿ, ಮಂಡಲಿಗಳಲ್ಲಿ ಎಲ್ಲರಿಗೂ ಬೇಕಾಗಿರತಕ್ಕಂಥ ಅಧಿಕಾರ ತಂತ್ರಜ್ಞಾನವನ್ನು ಕೊಡತಕ್ಕಂಥ ರೀತಿಯಲ್ಲಿ, ಎಲ್ಲಾ ಕಾರ್ಯ ಕ್ರಮಗಳನ್ನೂ ಕ್ರೊಢೀಕರಿಸತಕ್ಕ ಅಧಿಕಾರ ಇವುಗಳಿಗೆ ಇದೆ. ಅದನ್ನು ಉಪಯೋಗಿಸತಕ್ಕ ಜಾಣ್ಮೆಯ ಮೇಲೆ ಈ ಸಮಿತಿಯ ಪ್ರಭಾವ ಗೊತ್ತಾಗುತ್ತದೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೬೭ (೬೧೫) ಮಾನ್ಯ ಸದಸ್ಯರ ಗೈರುಹಾಜರಿ.

ಆಕ್ಟಾಯಿ ಅನುದಾನ ಕುರಿತು

೬೧೫. ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ)—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆಕ್ಟಾಯಿ ಅನುದಾನವನ್ನು ಪಡೆಯುದಿರುವ ನಗರಸಭೆಗಳ ಸಂಖ್ಯೆ ಎಷ್ಟು ?

ಆ) ಈ ನಗರಸಭೆಗಳಿಗೆ ಆಕ್ಟಾಯಿ ಅನುದಾನವನ್ನು ಮಂಜೂರು ಮಾಡಲು ಸರ್ಕಾರದವರು ಒಪ್ಪಿಕೊಂಡಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಸದರಿ ನಗರಸಭೆಗಳಿಗೆ ಆಕ್ಟಾಯಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು)—

ಅ) ೨೭ ಪುರಸಭೆಗಳು.

ಆ) ಇಲ್ಲ. ಆದರೆ ತಲಾ ೬.೮೩ರೂ.ಗಳಂತೆ ೧೯೭೧ರ ಜನಗಣತಿ ಆಧಾರದ ಮೇಲೆ ದಿನಾಂಕ ೨೩-೧೧-೧೯೮೭ರಲ್ಲಿ ಪರಿಹಾರ ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ,—ಮಾನ್ಯ ಅಧ್ಯಕ್ಷರೇ. ಪ್ರತಿವರ್ಷ ಜನಗಣತಿಯ ಆಧಾರದ ಮೇಲೆ ತಲಾ ೬.೮೩ ರೂಪಾಯಿಗಳಂತೆ ಪರಿಹಾರಧನವನ್ನು ಬಿಡುಗಡೆ ಮಾಡುತ್ತಿದ್ದಾರೆ. ಇದನ್ನು ಹೆಚ್ಚು ಮಾಡಲು ಸರ್ಕಾರದವರು ಮನಸ್ಸು ಮಾಡಿದ್ದಾರೆಯೇ ? ಇನ್ನೊಂದು ವಿಚಾರ ಎಂದರೆ, ಇದಕ್ಕೆ ೧೯೭೧ನೇ ಇಸವಿಯ ಜನಗಣತಿಯನ್ನು ಆಧಾರವಾಗಿ ಹಿಡಿದಿದ್ದಾರೆ, ೧೯೮೧ನೇ ಇಸವಿಯ ಜನಗಣತಿಯ ಪ್ರಕಾರವಾಗಿ ಇದನ್ನು ಕೊಡುತ್ತಾರೆಯೇ ಎಂಬ ಬಗ್ಗೆ ವಿಚಾರ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—೧೯೭೧ನೇ ಇಸವಿಯ ಜನಗಣತಿಯ ಪ್ರಕಾರ ಲೆಕ್ಕ ತೆಗೆದು ಕೊಂಡಿದ್ದೇವೆ, ಈ ೨೭ ಪುರಸಭೆಗಳಿಗೆ ಆಕ್ಟ್ರಾಯ್ ಕಾಂಪನ್‌ಸೇಷನ್ ಬರೆದಿರುವುದಕ್ಕೆ ಕಾರಣ ಬೇರೆ ಇದೆ. ೧೯೭೯ರಲ್ಲಿ ಆಕ್ಟ್ರಾಯ್ ರದ್ದು ಮಾಡುವ ಕಾಲದಲ್ಲಿ ಈ ೨೭ ಪುರಸಭೆಗಳಲ್ಲಿ ಆಕ್ಟ್ರಾಯ್ ಇರಲಿಲ್ಲ. ಇದುವರೆಗೆ ಇವುಗಳಿಗೆ ಆಕ್ಟ್ರಾಯ್ ಪರಿಹಾರ ಧನ ಹೋಗುತ್ತಿರಲಿಲ್ಲ, ಆದರೆ ಸರಕಾರ ಹೋದ ವರ್ಷ ಒಂದು ಪರಿಶೀಲನೆಯನ್ನು ಮಾಡಿ, ಇವುಗಳಿಗೆ ಒಂದು ರೀತಿ ಸಹಾಯ ಮಾಡಬೇಕೆಂದು ಹೇಳಿ, ಆಕ್ಟ್ರಾಯ್ ಪರಿಹಾರಧನ ಎಂದೂ ಅಲ್ಲ, ಬೇರೆ ಅನುದಾನ ರೂಪದಲ್ಲಿ ಸಹಾಯ ಮಾಡಬೇಕೆಂದು ಒಂದು ಅಂದಾಜನ್ನು ಹಾಕಿ. ಇಷ್ಟು ಹಣ ಎಂದು ಕೊಡುತ್ತಿದ್ದೇವೆ. ಆದರೆ ಈ ಹಣ ಹಕ್ಕಿನ ಪ್ರಕಾರವಾಗಿ ಅವುಗಳಿಗೆ ಹೋಗುವಂತಹ ಹಣ ಅಲ್ಲ. ಇದನ್ನು ಹೋದ ವರ್ಷದಿಂದ ಮಾಡಿದ್ದೇವೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—೧೯೮೧ನೇ ಇಸವಿಯ ಜನಗಣತಿಯ ಪ್ರಕಾರ ಏನಾದರೂ ಕೊಡುವುದಕ್ಕೆ ತಾವು ವಿಚಾರ ಮಾಡುತ್ತೀರಾ ? ಆಕ್ಟ್ರಾಯ್ ಅನುದಾನ ಪಡೆದಿರುವಂತಹ ಪುರಸಭೆಗಳಿಗೂ ಕೂಡಾ ಅಭಿವೃದ್ಧಿ ಗ್ರಾಂಟ್ ಕೊಡುತ್ತಿದ್ದೀರಿ, ಹಾಗೆ ಆಕ್ಟ್ರಾಯ್ ಪಡೆಯಲಾರದಂಥ ಪುರಸಭೆಗಳಿಗೂ ಇನ್ನೂ ಹೆಚ್ಚಿನ ಪರಿಹಾರ ಧನವನ್ನು ಬಿಡುಗಡೆ ಮಾಡುತ್ತೀರಾ, ಹೇಗೆ ? ಕೆಲವು ಪುರಸಭೆಗಳು ಆಕ್ಟ್ರಾಯ್ ಗ್ರಾಂಟನ್ನೂ ಪಡೆಯುತ್ತಿವೆ, ಅಭಿವೃದ್ಧಿ ಗ್ರಾಂಟನ್ನೂ ಪಡೆಯುತ್ತಿವೆ, ಇದನ್ನು ೧೯೭೧ರ ಜನಗಣತಿ ಪ್ರಕಾರ ಪಡೆದುಕೊಳ್ಳುತ್ತಿವೆ, ಈ ೨೭ ಪುರಸಭೆಗಳಿಗೆ ಹೆಚ್ಚಿನ ಅನುದಾನವನ್ನು ಕೊಡಲು ಯಾವ ವ್ಯವಸ್ಥೆಯನ್ನು ಮಾಡುತ್ತೀರಿ ಎನ್ನುವ ಬಗ್ಗೆ ಒಂದು ನಿರ್ದಿಷ್ಟವಾದ ಉತ್ತರವನ್ನು ತಾವು ದಯವಿಟ್ಟು ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.—ನಾನು ಆಗಲೇ ಹೇಳಿದೆ, ಈ ಆಕ್ಟ್ರಾಯ್ ಪರಿಹಾರ ಧನವನ್ನು ಈ ೨೭ ಪುರಸಭೆಗಳಿಗೆ ಕೊಡುವಂಥಾದ್ದು ಇಲ್ಲ. ಬೇರೆ ಅಭಿವೃದ್ಧಿ ಅನುದಾನವನ್ನು ಎಲ್ಲರಿಗೂ ಕೊಡುವ ಹಾಗೆ ಇವರಿಗೂ ಕೊಡುತ್ತಿದ್ದೇವೆ. ಆಕ್ಟ್ರಾಯ್ ಪರಿಹಾರ ಧನವನ್ನು ಕೊಡದೇ ಇರುವುದರಿಂದ ಈ ೨೭ ಪುರಸಭೆಗಳಿಗೆ ಹೋದ ವರ್ಷದಿಂದ ಮಾತ್ರ ಪರಿಶೀಲನೆ ಮಾಡಿ ಇವು ಸಣ್ಣ ಮುನಿಸಿಪಾಲಿಟಿಗಳು, ಇವುಗಳಿಗೆ ಸಹಾಯ ಮಾಡಬೇಕೆಂದು ಹೇಳಿ, ವಿಶೇಷವಾಗಿ ಸರಕಾರದ ಆಜ್ಞೆಯನ್ನು ಹೊರಡಿಸಿ, ೧೯.೦೩ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಬಿಡುಗಡೆ ಮಾಡುತ್ತಿದ್ದೇವೆ. ಇದು ಆಕ್ಟ್ರಾಯ್ ಪರಿಹಾರಧನ ಎಂದು ಅಲ್ಲ, ಅದರ ಪರವಾಗಿ ಅಭಿವೃದ್ಧಿಗಾಗಿ ಹಣ ಎಂದು ಕೊಟ್ಟಿದ್ದೇವೆ. ಇದರಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿ ಎಂದು ಕೊಟ್ಟಿದ್ದೇವೆ. ಈ ರೀತಿ ಪ್ರತಿ ವರ್ಷ ಮಾಡುತ್ತೇವೆ. ಇದು ಆಕ್ಟ್ರಾಯ್ ಪರಿಹಾರದ ಬದಲಿಗೆ ಕೊಡುತ್ತಿರತಕ್ಕದ್ದು ಅಷ್ಟೇ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಪುರಸಭೆ ಮಂತ್ರಿ ನಗರಸಭೆಗಳಿಗೆ ಆಕ್ಟ್ರಾಯ್ ಗ್ರಾಂಟ್ ಕೊಡುತ್ತಿದ್ದೀರಿ. ಒಂದು ವರ್ಷದಲ್ಲಿ ನಾಲ್ಕು ಕಂತುಗಳ ರೂಪದಲ್ಲಿ ಕೊಡುತ್ತಿದ್ದೀರಿ ಎರಡು ಕಂತುಗಳನ್ನು ಕೊಟ್ಟಿದ್ದೀರಿ. ಇನ್ನೂ ಉಳಿದ ಹಣವನ್ನು ಬಿಡುಗಡೆ ಮಾಡದೆ ಪುರಸಭೆ ಮತ್ತು ನಗರಸಭೆಗಳ ಕೆಲಸ ಸ್ಥಗಿತವಾಗಿದೆ. ತಾವೇನಾದರೂ ನಿರ್ದಿಷ್ಟವಾಗಿ ಪುರಸಭೆ ಮತ್ತು ನಗರಸಭೆಗಳಿಗೆ ಆಕ್ಟ್ರಾಯ್ ಗ್ರಾಂಟ್ ಕೊಡುತ್ತೇವೆಂದು ಹೇಳುತ್ತೀರಾ ? ಮತ್ತು ಯಾವಾಗ ಬಿಡುಗಡೆ ಮಾಡುತ್ತೀರಿ ? ಸ್ಪಷ್ಟವಾಗಿ ಹೇಳಬೇಕು. ಏತಕ್ಕೆಂದರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದು.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಒಂದು ವರ್ಷದಲ್ಲಿ ನಾಲ್ಕು ಕಂತುಗಳಲ್ಲಿ ಆಕ್ಟ್ರಾಯ್ ಗ್ರಾಂಟನ್ನೂ ಬಿಡುಗಡೆಯಾಗುವುದುಂಟು. ಎರಡು ಕಂತುಗಳನ್ನು ಸೇರಿಸಿ ಡಿಸೆಂಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬಿಡುಗಡೆ ಮಾಡಿದ್ದೇವೆ, ಇನ್ನೂ ಎರಡು ಕಂತುಗಳನ್ನು ಬಿಡುಗಡೆ ಮಾಡುವುದಕ್ಕೆ ಟೈಂ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದೂ ಕಂತು ತಕ್ಷಣ ಬಿಡುಗಡೆಯಾಗಬೇಕು.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ ಜನಗಣತಿಯ ಆಧಾರದ ಮೇಲೆ ಅಂದರೆ ೧೯೭೧ನೇ ಜನಗಣತಿಯ ಆಧಾರದ ಮೇಲೆ ಪ್ರತಿ ವರ್ಷ ಆಕ್ಟ್ರಾಯ್ ಅನುದಾನ ವನ್ನು ಕೊಡುತ್ತಿದ್ದೀರಿ. ಪ್ರತಿ ವರ್ಷ ಬಿಡುಗಡೆ ಮಾಡುತ್ತೀರಾ ಹೇಗೆ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಹೋದ ವರ್ಷ ತೆಗೆದುಕೊಂಡಿದ್ದೇವೆ. ಈ ವರ್ಷದ ಸಂಪನ್ಮೂಲಗಳನ್ನು ನೋಡಿಕೊಂಡು ಪರಿಶೀಲನೆ ಮಾಡಿ ವಿಚಾರ ಮಾಡಬೇಕಾಗಿದೆ. ಇದು ಅವರು ಹಕ್ಕು ಎಂದೂ ಸರ್ಕಾರವನ್ನು ಕೇಳುವಂತಿಲ್ಲ. ಆದರೆ ಸರ್ಕಾರ ಮಾನವೀಯತೆ ದೃಷ್ಟಿಯಿಂದ ಪರಿಶೀಲನೆ ಮಾಡಿಕೊಟ್ಟರೆ ಕೊಡಬಹುದು. ಹೋದ ವರ್ಷ ಕೊಟ್ಟಿದ್ದೇವೆ. ಈ ವರ್ಷ ಪರಿಶೀಲನೆ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ : ೧೬೯ (೨೦೬) ಮಾನ್ಯ ಸದಸ್ಯರು ಗೈರು ಹಾಜರಿ

ಪ್ರಶ್ನೆ ಸಂಖ್ಯೆ : ೧೭೧ (೫೬೫) ಮಾನ್ಯ ಸದಸ್ಯರು ಗೈರು ಹಾಜರಿ

ಪ್ರಶ್ನೆ ಸಂಖ್ಯೆ : ೧೭೩ (೪೩೮) ಮಾನ್ಯ ಸದಸ್ಯರು ಗೈರು ಹಾಜರಿ

ಪ್ರಶ್ನೆ ಸಂಖ್ಯೆ : ೧೭೪ (೫೭೨) ಮಾನ್ಯ ಸದಸ್ಯರು ಗೈರು ಹಾಜರಿ (ವರ್ಗ ಮಾಡಲಾಗಿದೆ)

ಪ್ರಶ್ನೆ ಸಂಖ್ಯೆ : (ಅಲ್ಪಕಾಲಾವಧಿಪ್ರಶ್ನೆ ಸಂಖ್ಯೆ : ೨(೨೯) ಮಾನ್ಯ ಸದಸ್ಯರು ಗೈರು ಹಾಜರಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಎನ್. ಆರ್. ಇ. ಪಿ. ಆರ್. ಎಲ್. ಇ. ಜಿ. ಪಿ. ಡಿ. ಪಿ. ಎ. ಪಿ.ಗಳ ಯೋಜನೆಗಳಿಗೆ ನೀಡಿರುವ ಅನುದಾನ

೫೫೬. ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಲಕ್ಷ್ಮಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ನೇ ಸಾಲಿನಲ್ಲಿ ಈ ಕೆಳಗೆ ನಮೂದಿಸಿರುವ ಯೋಜನೆಗಳಿಗೆ ಒಟ್ಟು ಎಷ್ಟು ಮೊಬಲಗನ್ನು ಒದಗಿಸಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ ಮತ್ತು ಬರಗಾಲ ಪೀಡಿತ ಪ್ರದೇಶ ಕಾರ್ಯಕ್ರಮಗಳು

ಆ) ೧೯೮೭–೮೮ನೇ ಸಾಲಿಗೆ ಮೇಲೆ ಕಾಣಿಸಿದ ಯೋಜನೆಗಳಿಗೆ ವಿವಿಧ ಜಿಲ್ಲೆಗಳಿಗೆ ಕೊಟ್ಟಿರುವ ಅನುದಾನವೆಷ್ಟು.

ಇ) ಮೇಲೆ ಕಾಣಿಸಿದ ಅವಧಿಯಲ್ಲಿ ವಾಸ್ತವಿಕವಾಗಿ ಬಿಡುಗಡೆ ಮಾಡಿರುವ ಮೊಬಲಗೆಷ್ಟು, ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು).

ಈ) ೧೯೮೭–೮೮ನೇ ಸಾಲಿನಲ್ಲಿ ವಾಸ್ತವಿಕವಾಗಿ ಗುಲ್ಬರ್ಗಾ ಜಿಲ್ಲೆಗೆ ಖರ್ಚು ಮಾಡಿರುವ ಹಣವೆಷ್ಟು ?